# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/1663/2021
ಮಂಡನಾಧಿಕಾರಿಗಳ ಶಾಖೆ ಎ.ಆರ್.ಇ.17

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 30/04/2022
05/05/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ (1) ಶ್ರೀ ಕೆ. ಜೆ. ನಾಗೇಶ ತಂದೆ ಲೇಟ್ ಜಲರಪ್ಪ, ಪ್ರಥಮ ದರ್ಜೆ ಸಹಾಯಕ ಮತ್ತು ಪ್ರಭಾರ ರಾಜಸ್ವ ನಿರೀಕ್ಷಕರು, ಮುರಗಮಲ್ಲ ಹೋಬಳಿ, ಚಿಂತಾಮಣಿ ತಾಲ್ಲೂಕು ಚಿಕ್ಕಬಳ್ಳಾಪುರ ಜಿಲ್ಲೆ (2) ಶ್ರೀ ಶ್ರೀನಿವಾಸ ಎ.ವಿ. ತಂದೆ ವೆಂಕಟರಾಯಪ್ಪ, ಬೈರಸಂದ್ರ ಗ್ರಾಮ ಸಹಾಯಕರು, ಚಿಂತಾಮಣಿ ತಾಲ್ಲೂಕು ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೋಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಕೇಂದ್ರ ವಲಯ, ಬೆಂಗಳೂರು ಇವರು ಪೋಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಚಿಕ್ಕಬಳ್ಳಾಪುರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರಿಗೆ ಸಲ್ಲಿಸಿದ ತನಿಖಾ ವರದಿ ಹಾಗೂ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸರ್ಕಾರಿ ನೌಕರರಾದ (1) ಶ್ರೀ ಕೆ. ಜೆ. ನಾಗೇಶ ತಂದೆ ಲೇಟ್ ಜಲರಪ್ಪ, ಪ್ರಥಮ ದರ್ಜೆ ಸಹಾಯಕ ಮತ್ತು ಪ್ರಭಾರ ರಾಜಸ್ವ ನಿರೀಕ್ಷಕರು, ಮುರಗಮಲ್ಲ ಹೋಬಳಿ, ಚಿಂತಾಮಣಿ ತಾಲ್ಲೂಕು ಚಿಕ್ಕಬಳ್ಳಾಪುರ ಜಿಲ್ಲೆ, (2) ಶ್ರೀ ಶ್ರೀನಿವಾಸ ಎ.ವಿ. ತಂದೆ ವೆಂಕಟರಾಯಪ್ಪ, ಬೈರಸಂದ್ರ ಗ್ರಾಮ ಸಹಾಯಕರು, ಚಿಂತಾಮಣಿ ತಾಲ್ಲೂಕು (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರನ್ನು ಶ್ರೀ ಎಂ. ಆನಂದ ತಂದೆ ಲೇಟ್ ಮುನಿನರಸಿಂಹಯ್ಯ, ವಾಸ: ಮೂಗಲಮರಿ ಗ್ರಾಮ, ಭೂಮಿಶೆಟ್ಟಿಹಳ್ಳಿ ಪಂಚಾಯ್ತಿ, ಮುರಗಮಲ್ಲ ಹೋಬಳಿ, ಚಿಂತಾಮಣಿ ತಾಲ್ಲೂಕು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) **<u>ದೂರಿನ ಸಂಕ್ಷಿಪ್ತ ವಿವರಣೆ:-</u>** ಚಿಂತಾಮಣಿ ತಾಲ್ಲೂಕು ಮುರಗಮಲ್ಲ ಹೋಬಳಿ, ಮುಗಲಮರಿ ಗ್ರಾಮದ ಸರ್ವೆ ನಂ. 125/1 ರಲ್ಲಿ 0-33-08 ಗುಂಟೆ ಮತ್ತು ಸರ್ವೆ ನಂ. 125/2 0-30 ಗುಂಟೆ ಖುಷ್ಕಿ ಜಮೀನನ್ನು ಖರೀದಿಸಿದ್ದು ದೂರುದಾರರು ತನ್ನ ಸ್ನೇಹಿತನಾದ ನಲ್ಲರಾಳ್ಳಹಳ್ಳಿ ಗ್ರಾಮದ ಶ್ರೀ ಲಕ್ಷ್ಮಣರೆಡ್ಡಿ ರವರು 1 ನೇ ಎದುರುದಾರರವರನ್ನು ಖಾತೆ ಬದಲಾವಣೆ ಬಗ್ಗೆ ಕೇಳಲಾಗಿ 40,000/- ರೂಪಾಯಿಗಳ ಲಂಚದ ಹಣವನ್ನು ನೀಡಿದರೆ ಖಾತೆ ಬದಲಾವಣೆ ಮಾಡಿಕೊಡುವುದಾಗಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಸದರಿ ಲಂಚದ ಹಣವನ್ನು ಎದುರುದಾರರಿಗೆ ನೀಡಲು ಇಷ್ಟವಿಲ್ಲದ ಕಾರಣ, ದೂರುದಾರರು ಚಿಕ್ಕಬಳ್ಳಾಪುರ ಜಿಲ್ಲೆ ಎ.ಸಿ.ಬಿ. ಪೊಲೀಸ್ ಠಾಣೆಗೆ ಮೊಬೈಲ್ ಪೋನ್‌ನಲ್ಲಿ ವಾಯ್ಸ್ ರೆಕಾರ್ಡ್ ಮಾಡಿದ ಸಂಭಾಷಣೆಯೊಂದಿಗೆ ದೂರನ್ನು ದಿನಾಂಕ 21/06/2018 ರಂದು ನೀಡಿರುತ್ತಾರೆ. ಈ ಬಗ್ಗೆ ಚಿಕ್ಕಬಳ್ಳಾಪುರ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 02/2018 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 21/06/2018 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಕಂಪ್ಯೂಟರ್ ಮೂಲಕ ಸಿ.ಡಿ.ಗೆ ವರ್ಗಾಯಿಸಿಕೊಂಡು ಸಿ.ಡಿ.ಯನ್ನು ಆನ್ ಮಾಡಿ ಪಂಚರಿಗೆ ಕೇಳಿಸಿ ವಶಪಡಿಸಿಕೊಂಡಿರುತ್ತಾರೆ. ನಂತರ ಲಂಚದ ಹಣ ರೂ. 15,000/- ಗಳನ್ನು ದೂರುದಾರರು ಹಾಜರುಪಡಿಸಿದ್ದು, ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆದಿರುತ್ತಾರೆ. ಸದರಿ ಹಣಕ್ಕೆ ಫಿನಾಪ್ತಲಿನ್ ಪೌಡರ್ ಲೇಪಿಸಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಸದರಿ ದ್ರಾವಣದಲ್ಲಿ ನೋಟುಗಳಿಗೆ ಫಿನಾಪ್ತಲಿನ್ ಪೌಡರ್ ಲೇಪಿಸಿದ ನೆರಳು ಸಾಕ್ಷಿ/ಪಂಚನ ಎರಡೂ ಕೈ ಬೆರಳುಗಳನ್ನು ಪ್ರತ್ಯೇಕವಾಗಿ ದ್ರಾವಣಗಳಲ್ಲಿ ಅದ್ದಿ ತೆಗೆದಾಗ ಅವು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತವೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣಗಳನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡು ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ಶ್ರೀ ಸುಧಾಕರ ಬಿನ್ ದೇವರಾಜು ಕೆ. ನಿಲಯ ಪಾಲಕರು, ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಗಂಜಿಗುಂಟೆ ಗ್ರಾಮ ಶಿಡ್ಲಘಟ್ಟ ತಾಲ್ಲೂಕು ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ ದೂರುದಾರರೊಂದಿಗೆ

ಎದುರುದಾರರ ಬಳಿ ಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ, ನಂತರ ತಿಳಿಸಬೇಕೆಂದು ತನಿಖಾಧಿಕಾರಿಗಳು ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ನೀಡಿದ ವಾಯ್ಸ್ ರೆಕಾರ್ಡರ್‌ನಲ್ಲಿ ಧ್ವನಿ ಸಂಭಾಷಣೆಯನ್ನು ರೆಕಾರ್ಡ್ ಮಾಡಲು ದೂರುದಾರರಿಗೆ ತಿಳಿಸಿರುತ್ತಾರೆ. ದೂರುದಾರರಿಗೆ ಎದುರುದಾರರು ಲಂಚದ ಹಣ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ತನ್ನ ಬಲಗೈಯಿಂದ ತಲೆಯನ್ನು ಸವರಿಕೊಳ್ಳುವುದರ ಮೂಲಕ ಸಂಜ್ಞೆ ನೀಡಬೇಕೆಂದು ಸೂಚಿಸಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ಬೆಳಗ್ಗೆ 11-30 ರಿಂದ ಮಧ್ಯಾಹ್ನ 12-45 ರ ವರೆಗೆ ಪೊಲೀಸ್ ಠಾಣೆಯಲ್ಲಿ ನಿರ್ವಹಿಸಿರುತ್ತಾರೆ.

4) ದಿನಾಂಕ 21/06/2018 ರಂದು ಚಿಂತಾಮಣಿ ನಗರದ ಗೀತಾ ಮಂದಿರ ಹಿಂಭಾಗದಲ್ಲಿರುವ ಮುರಗಮಲ್ ಗ್ರಾಮದ 1ನೇ ಎದುರುದಾರರ ಖಾಸಗಿ ಕೊಠಡಿಯಲ್ಲಿ ದೂರುದಾರರೊಂದಿಗೆ ನೆರಳು ಸಾಕ್ಷಿ ಶ್ರೀ ಸುಧಾಕರ ಹಾಗೂ ದೂರುದಾರರ ಸ್ನೇಹಿತ ಶ್ರೀ ಲಕ್ಷ್ಮಣ ರೆಡ್ಡಿರವರು ಭೇಟಿಯಾಗಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಾಗ ದೂರುದಾರರು ಫಿನಾಫ್ತಲಿನ್ ಪುಡಿ ಲೇಪಿಸಿರುವ 15,000/- ರೂಪಾಯಿಗಳನ್ನು 1ನೇ ಎದುರುದಾರರ ಸೂಚನೆಯ ಮೇರೆಗೆ, 2ನೇ ಎದುರುದಾರರು ಲಂಚದ ಹಣವನ್ನು ನೀಡುವಂತೆ ಹೇಳಿದ್ದರ ಮೇರೆಗೆ, 2ನೇ ಎದುರುದಾರರು ತನ್ನ ಬಲಗೈಯಿಂದ ನೋಟುಗಳನ್ನು ಸ್ವೀಕರಿಸಿ, ಎಣಿಸಿ, ತನ್ನ ಎಡಭಾಗದ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ದೂರುದಾರರು ತನ್ನ ತಲೆಯನ್ನು ಬಲಗೈಯಿಂದ ಸವರಿಕೊಳ್ಳುವುದರ ಮೂಲಕ ತನಿಖಾಧಿಕಾರಿಯವರಿಗೆ ಸಂಜ್ಞೆ ಮಾಡಿರುತ್ತಾರೆ. ತನಿಖಾಧಿಕಾರಿಗಳು ಎರಡು ಬಟ್ಟಲುಗಳಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣಗಳನ್ನು ತಯಾರಿಸಿ, 2ನೇ ಎದುರುದಾರರ ಬಲಗೈ ಮತ್ತು ಎಡಗೈ ಬೆರಳುಗಳನ್ನು ಸದರಿ ದ್ರಾವಣದಲ್ಲಿ ಅದ್ದಿದಾಗ, ದ್ರಾವಣಗಳು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಅವುಗಳನ್ನು ಪ್ರತ್ಯೇಕವಾಗಿ ಖಾಲಿ ಬಾಟಲ್‌ಗಳಲ್ಲಿ ಹಾಕಿ ಸೀಲ್ ಮಾಡಿ ವಶಕ್ಕೆ ಪಡೆದಿದ್ದು ಇರುತ್ತದೆ. ತನಿಖಾಧಿಕಾರಿಯವರು 2ನೇ ಎದುರುದಾರರಿಗೆ ಬದಲಿ ಶರ್ಟಿನ ವ್ಯವಸ್ಥೆ ಮಾಡಿ ಅವರು ಧರಿಸಿದ್ದ ಶರ್ಟನ್ನು ಕಳಚಿಕೊಂಡು ಶರ್ಟಿನ ಎಡಭಾಗದ ಜೇಬನ್ನೂ ಸಹ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು ಅದನ್ನೂ ಕೂಡ ಖಾಲಿ ಬಾಟಲ್‌ಗಳಲ್ಲಿ ಹಾಕಿ ಸೀಲ್ ಮಾಡಿ ವಶಕ್ಕೆ ಪಡೆದಿದ್ದು ಇರುತ್ತದೆ. ಶರ್ಟನ್ನೂ

ಸಹ ಪ್ರತ್ಯೇಕವಾಗಿ ವಶಪಡಿಸಿಕೊಂಡಿರುತ್ತಾರೆ. ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ತನಿಖಾಧಿಕಾರಿಗಳು ನೆರಳು ಸಾಕ್ಷಿ ಶ್ರೀ ಸುಧಾಕರ ಡಿ. ಬಿನ್ ದೇವರಾಜ, ನಿಲಯ ಪಾಲಕರು ಸಹ ಪಂಚ ಅವರಿಂದ ಅಲ್ಲಿಯ ನಡುವಳಿಕೆಗಳನ್ನು ತಿಳಿದಿರುತ್ತಾರೆ. ಸದರಿ ಪಂಚನಾಮೆ ಕಾಲದಲ್ಲಿ ದೂರುದಾರರು ವಾಯ್ಸ್ ರೆಕಾರ್ಡರ್‌ನಲ್ಲಿ 1ನೇ ಎದುರುದಾರರು ಮತ್ತು 2ನೇ ಎದುರುದಾರರ ಜೊತೆ ಮಾತನಾಡಿದ ಸಂಭಾಷಣೆಯನ್ನು ಧ್ವನಿ ಮುದ್ರಣ ಮಾಡಿಕೊಂಡಿದ್ದು ಸದರಿ ವಾಯ್ಸ್ ರೆಕಾರ್ಡರ್‌ನ್ನು ಲ್ಯಾಪ್‌ಟಾಪ್‌ಗೆ ಹಾಕಿ ಕೇಳಿ ತಿಳಿದು ಪ್ರತ್ಯೇಕ ಲಿಪೀಕರಣ ಮಾಡಿ ಎರಡು ಸಿ.ಡಿ.ಗಳಿಗೆ ಅಳವಡಿಸಿ ಅವುಗಳನ್ನು ವಶಪಡಿಸಿಕೊಂಡಿರುತ್ತಾರೆ. ಎದುರುದಾರರ ಹಿರಿಯ ಅಧಿಕಾರಿಗಳಾದ ಶ್ರೀ ವಿಶ್ವನಾಥ ಎಸ್. ಎನ್., ತಹಶೀಲ್ದಾರರು, ಚಿಂತಾಮಣಿ ತಾಲ್ಲೂಕು ಇವರಿಗೆ ಸಂಭಾಷಣೆಯನ್ನು ಆಲಿಸಲು ಹೇಳಿ ಸದರಿ ಸಂಭಾಷಣೆಯಲ್ಲಿ 1 ಮತ್ತು 2ನೇ ಎದುರುದಾರರ ಧ್ವನಿಗಳನ್ನು ಗುರುತಿಸಿ ಎದುರುದಾರರ ಧ್ವನಿಗಳಿಗೆ ಹೋಲಿಕೆಯಾಗಿರುತ್ತದೆ ಎಂದು ತಿಳಿಸಿರುತ್ತಾರೆ. 1 ನೇ ಎದುರುದಾರರ ಸೂಚನೆಯ ಮೇರೆಗೆ 2ನೇ ಎದುರುದಾರರು ಲಂಚದ ಹಣವನ್ನು ಸ್ವೀಕರಿಸಿದ ಸ್ಥಳವು ಚಿಂತಾಮಣಿ ನಗರದ ಗೀತಾ ಮಂದಿರದ ಮುಂಭಾಗದಲ್ಲಿರುವ ಮೊದಲನೇ ಅಂತಸ್ತಿನ ಕಟ್ಟಡದ 3 ನೇ ಕೊಠಡಿಯಲ್ಲಿ ರಾಜಸ್ವ ನಿರೀಕ್ಷಕರು ಕುಳಿತುಕೊಳ್ಳುವ ಕೋಣೆಯಲ್ಲಿ ಲಂಚದ ಹಣವನ್ನು 2ನೇ ಎದುರುದಾರರು ಕೇಳಿ ಪಡೆದಿದ್ದು ಇರುತ್ತದೆ. ಈ ಬಗ್ಗೆ 1ನೇ ಎದುರುದಾರರಿಗೆ ಸಮಜಾಯಿಷಿ ನೀಡುವಂತೆ ಕೇಳಲಾಗಿ "ದಿ: 21/06/2018 ರಂದು ಸಂಜೆ 4-30 ರಿಂದ 5-00 ಘಂಟೆ ಸಮಯದಲ್ಲಿ ಲಕ್ಷ್ಮಣರೆಡ್ಡಿರವರು ನನ್ನ ಕೊಠಡಿಗೆ ಬಂದು ಊಟ ಆಯ್ತು ಸಾರ್ ಎಂದು ಕೇಳಿರುತ್ತಾರೆ. ಈಗ ಊಟ ಮಾಡಿ ಬಂದಿರುವುದಾಗಿ ತಿಳಿಸಿರುತ್ತೇನೆ. ನಂತರ ಲಕ್ಷ್ಮಣರೆಡ್ಡಿರವರು ನನಗೆ ತಿಳಿಯದೆ ಆನಂದ್ ಎಂಬುವವರನ್ನು ಕರೆದುಕೊಂಡು ಬಂದು ನಮ್ಮ ಕೊಠಡಿಯಲ್ಲಿ ಇದ್ದು, ಭೈರಸಂದ್ರ ಕಂದಾಯ ವೃತ್ತದ ಗ್ರಾಮ ಸಹಾಯಕರಾದ ಶ್ರೀನಿವಾಸ ಎ.ವಿ. ರವರಿಗೆ ಹಣವನ್ನು ಕೊಟ್ಟಿರುವುದಾಗಿ ತಿಳಿದು ಬಂದಿರುತ್ತದೆ. ಸದರಿ ಹಣವನ್ನು ನಾನು ಯಾರಿಂದಲೂ ಕೇಳಿರುವುದಿಲ್ಲ, ನನಗೆ ತಿಳಿಯದೆ ಗ್ರಾಮ ಸಹಾಯಕನ ಕೈಯಿಗೆ ಹಣವನ್ನು ನೀಡಿರುತ್ತಾರೆಂದು ತಿಳಿದಿರುತ್ತದೆ. ಸದರಿ ಲಕ್ಷ್ಮಣರೆಡ್ಡಿ ರವರಿಗೆ ಸಂಬಂಧಿಸಿದ ಯಾವುದೇ ಖಾತೆ ಬದಲಾವಣೆ ಅರ್ಜಿಗಳು ನನ್ನ ಬಳಿ ಬಾಕಿ ಇರುವುದಿಲ್ಲ. ಸದರಿ ಲಕ್ಷ್ಮಣರೆಡ್ಡಿರವರು ಬ್ರೋಕರ್ ಆಗಿದ್ದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಖಾತೆ ಬದಲಾವಣೆಗೆ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ನಾನು ಲಕ್ಷ್ಮಣರೆಡ್ಡಿ ಮತ್ತು ಆನಂದ್ ರವರಿಂದ ಯಾವುದೇ ರೀತಿಯ ಹಣವನ್ನು ಕೇಳಿರುವುದಿಲ್ಲ ಹಾಗೂ ಸದರಿಯವರಿಂದ

ಹಣವನ್ನು ಪಡೆದಿರುವುದಿಲ್ಲ. ಮಾನ್ಯ ಎಸಿಬಿ ಅಧಿಕಾರಿಗಳು ನನ್ನ ಕೊಠಡಿಗೆ ಆಗಮಿಸಿ ಹಣದ ಬಗ್ಗೆ ವಿಚಾರಿಸಿರುತ್ತಾರೆ. ನಾನು ಲಕ್ಷ್ಮಣರೆಡ್ಡಿ ಮತ್ತು ಆನಂದರವರಿಂದ ಯಾವುದೇ ಹಣ ಕೇಳಿರುವುದಿಲ್ಲ ಹಾಗೂ ಹಣವನ್ನು ನಾನು ಪಡೆದಿರುವುದಿಲ್ಲವೆಂದು ತಮ್ಮಲ್ಲಿ ಹೇಳಿಕೆ ಸಲ್ಲಿಸಿರುತ್ತೇನೆ" ಎಂದು ಪ್ರತಿರಕ್ಷಣಾ ಹೇಳಿಕೆ ನೀಡಿರುತ್ತಾರೆ. 2ನೇ ಎದುರುದಾರರು ತಮ್ಮ ಪ್ರತಿ ರಕ್ಷಣಾ ಹೇಳಿಕೆಯಲ್ಲಿ "ವಿಸಯ ಸೋಮಿ ಎ.ವಿ ಶ್ರೀನಿವಾಸ ಬಿನ್ ವೆಂಕಟರಾಯಪ್ಪ ರೂಮುಹತ್ತರಿ ಬಂದಿ ಕುತುಕೊಂಡಿ ಅವರು ಬಂದು ಕುತುಕೊಂಡಕು RI ಮಾತನಾಡುತ ಪಕ್ಕದಲ್ಲಿ ಕುತುಕೊಂಡಿಇದ್ರ ಶಿನಪ್ಪ ಅವರು ಕೊಡುತಾರೆ ಇಸೂಕ ದುಡು ಇಸಕೊಲ್ಲ ಇಸಕೊಲ್ಲಕ್ಕ RI ರವರು ತಿಲಿಸಿರುತಾರೆ" ಎಂದು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ. ಹಂತ ಹಂತವಾಗಿ ಫೋಟೋಗಳನ್ನು ತೆಗೆದಿರುತ್ತಾರೆ. ದೂರುದಾರರಿಗೆ ಸಂಬಂಧಿಸಿದ ದಾಖಲೆಗಳನ್ನು ನೀಡುವಂತೆ 1ನೇ ಎದುರುದಾರರಿಗೆ ತನಿಖಾಧಿಕಾರಿಗಳು ಸೂಚಿಸಿದ್ದ ಮೇರೆಗೆ ಸದರಿಯವರು ತಮ್ಮ ಡ್ರಾ ನಿಂದ ತೆಗೆದು ಹಾಜರುಪಡಿಸಿರುತ್ತಾರೆ. ಸದರಿ ದಾಖಲಾತಿಗಳನ್ನು ಜೆರಾಕ್ಸ್ ತೆಗೆದುಕೊಂಡು ಹಾಜರಿದ್ದ ಶ್ರೀ ವಿಶ್ವನಾಥ ಎಸ್. ಎನ್. ತಹಶೀಲ್ದಾರ, ಚಿಂತಾಮಣಿ ಇವರಿಂದ ದೃಢೀಕರಿಸಿ ವಶಪಡಿಸಿಕೊಂಡಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪಂಚನಾಮೆಯನ್ನು ಸಂಜೆ 4-45 ರಿಂದ ರಾತ್ರಿ 9-00 ಘಂಟೆಯವರೆಗೆ ನಿರ್ವಹಿಸಿರುತ್ತಾರೆ.

5) ಸದರಿ ಹಣದ ಬಗ್ಗೆ ತನಿಖಾಧಿಕಾರಿಯು ಎದುರುದಾರರನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

6) ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆ ಪೂರೈಸಿದ ನಂತರ 1 ಮತ್ತು 2ನೇ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

7) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಮುದ್ದೇಮಾಲುಗಳು ಮತ್ತು ಸಾಕ್ಷ್ಯಾಧಾರಗಳಿಂದ 1 ಮತ್ತು 2ನೇ ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

8) ಧ್ವನಿ ವಿಶ್ಲೇಷಣಾ ವರದಿ, ವಿಧಿ ವಿಜ್ಞಾನ ಪ್ರಯೋಗಾಲಯದಿಂದ ಬಂದಿರುವುದಿಲ್ಲ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

9) 1ನೇ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ದಿನಾಂಕ 17/11/2021 ರಂದು ಸಲ್ಲಿಸಿರುತ್ತಾರೆ. ಆದರೆ 2ನೇ ಎದುರುದಾರರಿಗೆ ಸಾಕಷ್ಟು ಕಾಲಾವಕಾಶ ನೀಡಿದರೂ ಸಹ ತಮ್ಮ ಸಮಜಾಯಿಷಿಯನ್ನು ಇದುವರೆಗೂ

ನೀಡಿರುವುದಿಲ್ಲ. ಆದ್ದರಿಂದ ಪರಿವೀಕ್ಷಣಾ ಟಿಪ್ಪಣಿಗೆ 2 ನೇ ಎದುರುದಾರರ ಸಮಜಾಯಿಷಿ ಇರುವುದಿಲ್ಲವೆಂದು ಪರಿಗಣಿಸಲಾಗಿದೆ ಹಾಗೂ ಸಮಜಾಯಿಷಿ ನೀಡದೇ ಇರುವುದರಿಂದ ಇದೂ ಸಹ ಅವರು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೆ, ಶ್ರದ್ಧೆಯನ್ನು ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. 1ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ಪ್ರಭಾರ ಕಂದಾಯ ನಿರೀಕ್ಷಕರು ಮುರುಗಮಲ್ಲ ಹೋಬಳಿ, ಚಿಂತಾಮಣಿ ತಾಲ್ಲೂಕು ಇವರು ದೂರುದಾರರ ಖಾತೆ ಬದಲಾವಣೆಗಾಗಿ ಜಮೀನಿನ ಸರ್ವೆ ನಂ. 125/1 ಕ್ಷೇತ್ರ 33.8 ಗುಂಟೆ ಮತ್ತು ಸ.ನಂ. 125/2 ಕ್ಷೇತ್ರ 33 ಗುಂಟೆ ಅರ್ಜಿಯನ್ನು ದಿ: 31/03/2018 ರಂದು ಅನೇಕ ಕಾರಣಗಳಿಂದಾಗಿ ನಿರಾಕರಿಸಿರುತ್ತಾರೆ. ಆದ್ದರಿಂದ ಲಂಚ ಕೇಳುವ ಪ್ರಮೇಯವೇ ಉದ್ಭವಿಸುವುದಿಲ್ಲ ಕಾರಣ ಜಪ್ತಿ ಪಂಚನಾಮೆಯ ಕಾಲದಲ್ಲಿ ಈ ಬಗ್ಗೆ ಯಾವುದೇ ಕಡತವು ಬಾಕಿ ಇರಲಿಲ್ಲ. ಈಗಾಗಲೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಸ್ಪೆಶಲ್ ಕೇಸ್ ನಂ. 34/2019 ತೀರ್ಪಿಗಾಗಿ ಬಾಕಿ ಇರುತ್ತದೆ. ದೂರುದಾರರು ಮತ್ತು ನೆರಳು ಸಾಕ್ಷಿ ಲಂಚದ ಹಣ ಬೇಡಿಕೆ ಮತ್ತು ಪಡೆದ ಬಗ್ಗೆ ಸಾಕ್ಷ್ಯ ನುಡಿದಿರುವುದಿಲ್ಲ. ಆದ್ದರಿಂದ ಇಲಾಖಾ ವಿಚಾರಣೆಯನ್ನು ಕೈಗೊಳ್ಳುವ ಪ್ರಮೇಯವೇ ಉದ್ಭವಿಸುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕು" ಎಂದು ತಮ್ಮ ಸಮಜಾಯಿಷಿಯಲ್ಲಿ ಕೋರಿ ಕೊಂಡಿರುತ್ತಾರೆ.

10) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

11) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು, ದಾಖಲಾತಿಗಳನ್ನು ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈ ಬಿಡಲು ಸೂಕ್ತ/ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

12) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಟೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

13) ಆದ್ದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i) ರಿಂದ (iii) ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ

ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದೂ ಕೋರಿದೆ.

14) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

K. N. Phanindra 05/03/22

**(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)**
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.